# ಉಡುಪಿ ನಗರಸಭೆ

**ದಿನಾಂಕ 22.11.2008ರ ವಿಶೇಷ ಸಾಮಾನ್ಯ ಸಭೆಯ ನಿರ್ಣಯ ನಂಬ್ರ 692ರ ಯಥಾ ನಕಲು**

**ಉನಸ:ಟಿ1:ಸಿಆರ್:2008-09**: 2008-09ನೇ ಸಾಲಿನ ಎಸ್.ಎಫ್.ಸಿ. ನಿಧಿಯಡಿಯಲ್ಲಿ ಈ ಕೆಳಗಿನ ಕಾಮಗಾರಿಯ ಕ್ರಿಯಾಯೋಜನೆಗೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಮಂಜೂರಾತಿ ಪಡೆದು ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ದಿನಾಂಕ:19.10.2008ರ ಉದಯವಾಣಿ ದಿನಪತ್ರಿಕೆಯಲ್ಲಿ ಮತ್ತು ಟೆಂಡರು ಬುಲೆಟಿನ್‌ನಲ್ಲಿ ಪ್ರಕಟಿಸಿದ ಬಹಿರಂಗ ಟೆಂಡರಿಗೆ ಉತ್ತರವಾಗಿ ಬಂದಿರುವ ಎರಡು ಟೆಂಡರುಗಳಲ್ಲಿ ಶ್ರೀ ಸುರೇಶ್ ಶೆಟ್ಟಿ, ಗುತ್ತಿಗೆದಾರರು ಇವರು 08-09 ಸಾಲಿನ ದರಕ್ಕೆ ಸೂಚಿಸಿದ ಶೇ. 17.94 ಅಧಿಕ ದರವು ಕಡಿಮೆಯಾಗಿದೆ. ಸದರಿ ದರವನ್ನು ಪ್ರಸ್ತುತ ಸಾಲಿನ ಎಸ್.ಆರ್. ದರಕ್ಕೆ ತುಲನೆ ಮಾಡಿದಾಗ ಶೇ 6.96 ಅಧಿಕ ಆಗುತ್ತದೆ. ಬಂದಿರುವ ತಲನಾತ್ಮಕಪಟ್ಟಿ ಈ ಕೆಳಗಿನಂತಿದೆ. ನಗರಸಭೆಗೆ ಶೇ. 8.00 ಅಧಿಕ (ಪ್ರಸಕ್ತ ಸಾಲಿನ ದರಕ್ಕೆ) ದರದ ಟೆಂಡರನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಆದರೆ ಸರಕಾರವು ನಿಗಧಿಪಡಿಸಿದ ಆರ್ಥಿಕ ಪ್ರತ್ಯಾಯೋಜನೆಯಂತೆ ಸದ್ರಿ ಟೆಂಡರನ್ನು ಅಂಗೀಕರಿಸಲು ಮಂಜೂರಾತಿಗಾಗಿ ಮಾನ್ಯ ಜಿಲ್ಲಾಧಿಕಾರಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಒಪ್ಪಿಸಬೇಕಾಗಿದೆ.

ಆದುದರಿಂದ ಶ್ರೀ ಸುರೇಶ್ ಶೆಟ್ಟಿ, ಇವರ ಕಡಿಮೆ ದರದ (ರೂ. 5340462.00) ಟೆಂಡರನ್ನು ಅಂಗೀಕರಿಸಿ ಮಂಜೂರಾತಿ ಪಡೆಯಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಒಪ್ಪಿಸಲು ಆದೇಶ ಕೋರಿ ಮಂಡಿಸಿದೆ.

| ಟಿ. ಕ್ರ. ಸಂ 19 | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಟೆಂಡರು ಮೊತ್ತ | ಗುತ್ತಿಗೆದಾರರ ಹೆಸರು | ಸೂಚಿಸಿದ ದರ | ಗುತ್ತಿಗೆ ದಾರರು ನಮೂದಿಸಿರುವ ಐಟಂವಾರು ದರದಂತೆ ಒಟ್ಟು ಟೆಂಡರು ಮೊತ್ತ | ಪ್ರಸ್ತುತ ವರ್ಷದ ದರದಂತೆ ಅಂದಾಜು ಮೊತ್ತ | ಪ್ರಸ್ತುತ ವರ್ಷದ ದರದಂತೆ ಗುತ್ತಿಗೆದಾರರು ಸೂಚಿಸಿದ ದರಕ್ಕೆ ಶೇಕಡಾ | ಗುತ್ತಿಗೆ ದಾರರು ಒಡಂಬಡಿಕೆ ಯಂತೆ ಸೂಚಿಸಿದ ದರ . | ಗುತ್ತಿಗೆ ದಾರರ ಒಡಂಬಡಿಕೆ ದರವನ್ನು ಟೆಂಡರು ಮೊತ್ತಕ್ಕೆ ತುಲನೆ ಮಾಡಿದಾಗ ಬರುವ ಶೇಕಡಾ ಹೆಚ್ಚಳ/ ಕಡಿಮೆ | ಷರಾ |
|---|---|---|---|---|---|---|---|---|---|---|---|
| 1 | ನಗರಸಭಾ ವ್ಯಾಪ್ತಿಯ ಮಿಷನ್ ಆಸ್ಪತ್ರೆ ರಸ್ತೆ ಫೇವರ್ ಫಿನಿಶ್ ಮರುಡಾಮರೀಕರಣ ಮತ್ತು ಆರ್.ಸಿ.ಸಿ ಚರಂಡಿ ರಚನೆ. | 4560000.00 | 4560000.00 | ಶ್ರೀ ಸುರೇಶ್ ಶೆಟ್ಟಿ | 17.94 % ಅಧಿಕ | 5340462.00 | 4992823.00 | 6.96 % ಅಧಿಕ | - | - | ಇವರು ಇ.ಎಂ.ಡಿ.ಯನ್ನು ಠೇವಣಿ ರಶೀದಿ ರೂಪದಲ್ಲಿ ಇರಿಸಿದ್ದಾರೆ. |
| | | 4560000.00 | 535086.00 | ಶ್ರೀ ಎಸ್.ಎ. ಖಾದರ್ | 20.32 % ಅಧಿಕ | 5448091.00 | 4992823.00 | 9.12 % ಅಧಿಕ | - | - | ಇವರು ಇ.ಎಂ.ಡಿ.ಯನ್ನು ಡಿ.ಡಿ ರೂಪದಲ್ಲಿ ಇರಿಸಿದ್ದಾರೆ. |

**<u>ನಿರ್ಣಯ</u>**: ಉಲ್ಲೇಖಿತ ಕಾಮಗಾರಿಯನ್ನು 2008–09ನೇ ಸಾಲಿನ ಎಸ್.ಎಫ್.ಸಿ ನಿಧಿಯಡಿಲ್ಲಿ ಕೈಗೊಳ್ಳಲು ಟೆಂಡರನ್ನು ಆಹ್ವಾನಿಸಲಾಗಿದ್ದು, ಬಂದಿರುವ ಟೆಂಡರುಗಳಲ್ಲಿ ಶ್ರೀ ಸುರೇಶ ಶೆಟ್ಟಿ ಇವರು ಶೇ.17.94 ಅಧಿಕ ಸೂಚಿಸಿದ ದರವು ಕಡಿಮೆಯಾಗಿದ್ದು, ಇದು ಪ್ರಸಕ್ತ ಸಾಲಿನ ದರಕ್ಕೆ ಶೇ. 6.96 ಅಧಿಕ ಆಗಿದ್ದು ಈ ಕಡಿಮೆ ದರದ ಟೆಂಡರನ್ನು ಅಂಗೀಕರಿಸಿ ಮಂಜೂರಾತಿಗಾಗಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಒಪ್ಪಿಸಲು ಸರ್ವಾನುಮತದಿಂದ ಮಂಜೂರಾತಿ ನೀಡಲಾಯಿತು.

ಸಹಿ/–

ಅಧ್ಯಕ್ಷರು

ಉಡುಪಿ ನಗರಸಭೆ

:: – ಯಥಾ ನಕಲು – ::

ಪೌರಾಯುಕ್ತರು

ಉಡುಪಿ ನಗರಸಭೆ